ಹೂವುಗಳನ್ನು ಬಾಳೆನಾರಿನಿಂದ ಕಟ್ಟಿಯೋ, ಪೋಣಿಸಿಯೋ ಗಂಡನ ಫೋಟೋಕ್ಕೆ ಏರಿಸುವುದು ರೋಹಿಣಿಯ ದಿನದ ಅಭ್ಯಾಸವಾಗಿಬಿಟ್ಟಿತ್ತು. ಮಗಳು ತವರಿಗೆ ಬಂದಾಗ ಈ ಉದ್ಯೋಗ ಅವಳ ಪಾಲಿಗೆ. ಕೆಲವೊಮ್ಮೆ ಮುರೀ ಹಿಂಡಿದ ಒದ್ದೆ ಬಟ್ಟೆಯಿಂದ ಪಟದ ಗಾಜು ವರೆಸಿ, ಫಳಫಳಿಸುವಂತೆ ಮಾಡಿ, 'ಅಪ್ಪ ನನ್ನೇ ನೋಡ್ತಿದಾನೆ ಅಮ್ಮಾ...' ಎನ್ನುವಾಗ ಅವಳ ದನಿ ಒದ್ದೆಯಾಗಿರುತ್ತಿತ್ತು. ರೋಹಿಣಿಗೂ ಮಗಳು ಬಂದ ಖುಷಿಯಲ್ಲಿ ಗಂಡ ಯಾವತ್ತಿಗಿಂತಾ ಸಂತೃಪ್ತನಂತೆ ಕಾಣಿಸುತ್ತಿದ್ದಾನೆಂದು ವಿನಾಕಾರಣ ಅನಿಸಿ, ಜೊತೆಜೊತೆಗೆ ತಾನು ಯಾವುದನ್ನು ಮಾಡಬಾರದೆಂದು ಅವನು ನಿಷೇಧ ಹೇರಿದ್ದನೋ ಅದನ್ನು ಅವನ ಕಣ್ಣಳವಿನಲ್ಲೇ ಮಾಡುತ್ತಿರುವೆನೆಂಬ ಪಾಪಪ್ರಜ್ಞೆಯಂತಾದ್ದೇನೋ ಕಾಡಿ ಒಂದಷ್ಟು ಹೊತ್ತು ಮನಸ್ಸು ಕದಡಿದಂತಾಗುತ್ತಿತ್ತು. ಈ ಅನ್ಯಮನಸ್ಕತೆಯ ಸುಳು ಗೊತ್ತಾದರೆ ಗದರುತ್ತಿದ್ದಳು ಶಾಂಭವಿ,

"ನೀನೊಬ್ಳು, ಕಡ್ಡೀನ ಗುಡ್ಡ ಮಾಡ್ತಿದ್ದಿ. ಅಪ್ಪ ಏನು ಹೇಳಿದ್ನೋ, ನೀನು ಏನು ಅರ್ಥ ಮಾಡಿಕೊಂಡ್ಯೋ, ಅದೆಲ್ಲಾ ಹಳೇ ಕತೆ ಕಟ್ಟಿಟ್ಬಿಡು ಅಮ್ಮಾ. ಈಗ ನಿಂಗೆ ಬೇಕಾದಷ್ಟು ಪುರುಸೊತ್ತುಂಟು. ಹೊತ್ತು ಹೋಗ್ದೆ ತಲೆ ಕೆಡಿಸ್ಕೊಳ್ಳೋಕಿಂತಾ ನಿಂಗೆ ಖುಷಿಯಾಗೋದ್ರಲ್ಲಿ ತೊಡಗಿಸಿಕೊಂಡ್ರೆ ಬೇಡ ಅಂತಾನಾ ಅಪ್ಪ, ಒಂದು ವೇಳೆ ಅವನು ಇದೆಲ್ಲಾ ನೋಡ್ತಿದಾನೆ ಅನ್ನೋದು ನಿಜವೇ ಆಗಿದ್ರೆ? ಅಷ್ಟೆಲ್ಲಾ ಸ್ವಾರ್ಥಿ ಅಲ್ಲ ನನ್ನಪ್ಪ, ನಂಗೊತ್ತು..."

ಮಗಳ ವಿಶ್ವಾಸದ ಮಾತಿಗೆ ಪ್ರತಿ ನುಡಿಯಲು ಹೋಗುತ್ತಿರಲಿಲ್ಲ ರೋಹಿಣಿ. ಹೀಗೆಯೇ ಇರಬೇಕು ಮಗಳು. ಹೆತ್ತವರ ಮೇಲೆ ನಂಬುಗೆ ಇರಬೇಕು, ಪ್ರೀತಿ ಇರಬೇಕು, ವಹಿಸಿಕೊಳ್ಳುವಿಕೆಯೂ...

ಮಗಳ ಒತ್ತಾಸೆಯ ಜೊತೆ ವರ್ಷ ವರ್ಷಗಳಿಂದ ಅದುಮಿಟ್ಟಿದ್ದ ತನ್ನ ಸುಪ್ತ ಬಯಕೆ ಕೂಡಾ ಜಾಗೃತಗೊಂಡು, ಗಂಡ ಇರುವವರೆಗೆ ಅವನನ್ನು ಮೀರಲಿಲ್ಲ ತಾನು. ಮೀರಬಾರದೆಂದಿರಲಿಲ್ಲ, ಆ ಧೈರ್ಯ ಯಾಕೋ ಬರಲಿಲ್ಲ. ಧೈರ್ಯ ಎನ್ನುವ ಪದಕ್ಕಿಂತಾ ಬೆಳೆಯುತ್ತಿರುವ ಮಗಳ ಎದುರಿನಲ್ಲಿ ಮನಸ್ತಾಪದ ಬಿಸಿ ತೋರಿಸಿಕೊಳ್ಳಬಾರದೆಂಬ ಸಂಯಮ. ತನಗೆ ತಾನೇ ಹಾಕಿಕೊಂಡ ಕಟ್ಟುಪಾಡು. ಅತ್ತೆ ಕೂಡಾ ಜೊತೆಗಿದ್ದರಲ್ಲ? ಮನೆತನದ ನೇಮನಿಷ್ಠೆ, ರೀತಿರಿವಾಜು, ಹಬ್ಬಹರಿದಿನಗಳ ಆಚರಣೆ ಇತ್ಯಾದಿಗಳನ್ನು ಅರೆದು ಕುಡಿಸಲು ಸೆರಗು ಕಟ್ಟಿ ನಿಂತಿದ್ದರು ಅತ್ತೆ. ಯಾವುದರಲ್ಲಿ ಚೂರು ಅರೆಯಾದರೂ ಅವರಿಗೆ ಅದೇನೋ ಕಸಿವಿಸಿ. ಎಲ್ಲರನ್ನೂ ಸಂತೃಪ್ತಿ ಪಡಿಸುತ್ತಾ ಅವರ ತಾಳಕ್ಕೆ ತಕ್ಕಂತೆ ಕುಣಿದಿದ್ದು ತನ್ನ ದೌರ್ಬಲ್ಯವಾ ಅಥವಾ ಹೆಗ್ಗಳಿಕೆಯಾ? ಒಂದು ಸಂಸಾರ ಅಂದರೆ ಹೀಗೆ ಬೆರಳುಗಳನ್ನೆಲ್ಲಾ ಒಗ್ಗೂಡಿಸಿಕೊಂಡ ಬಿಗಿಮುಷ್ಟಿಯಂತೆ ಒಗ್ಗಟ್ಟಿನಿಂದಿರಬೇಕಾ? ಪ್ರತ್ಯೇಕತೆ ಅನ್ನುವುದು ಪ್ರತಿಭಟನೆಯ ಸಂಕೇತದಂತೆ ಕಂಡು ಮನೆಯ ವಾತಾವರಣವನ್ನು ಹದಗೆಡಿಸಿದರೆ ಅದರ ಹೊಣೆ ಯಾರದ್ದು? ತನ್ನಿಂದಾಗಿ ಮನೆಯಲ್ಲಿ ಯಾವತ್ತೂ ಅಸಮಾಧಾನದ ಹೊಗೆ ಏಳಲಿಲ್ಲ. ವಿರಸ ಕಾಣಿಸಿಕೊಳ್ಳಲಿಲ್ಲ. ಎಷ್ಟು ಕಷ್ಟ, ತನ್ನ ಸ್ವಂತಿಕೆಗೆ ತಾನೇ ಬೇಲಿ ಹಾಕಿ ಬಂಧನದಲ್ಲಿಡುವುದು. ಎಷ್ಟು ಸುಲಭ, ಪ್ರತಿರೋಧಕ್ಕೆಳಸದೆ ಎಲ್ಲವನ್ನೂ ಒಪ್ಪಿಕೊಳ್ಳುವುದು. ಆಗೀಗ ಪ್ರಶ್ನೆ ಕಾಡಿಸದೆ ಇರುತ್ತಿರಲಿಲ್ಲ, 'ನಾನೇ ಏಕೆ ಇನ್ನೊಬ್ಬರ ಇಚ್ಛೆಗೆ ಮಣಿದು ಬಾಳಬೇಕು? ನನ್ನ ಇಚ್ಛೆಗೆ ಬೆಲೆಯೇ ಇಲ್ಲವಾ? ಅಷ್ಟು ನಗಣ್ಯಳಾ ತಾನು?' 'ಬಾ...' ಎಂದು ಇವನು ತೋಳು ಚಾಚಿ ಕರೆದ. ಯಾವ ನಿಬಂಧನೆಗಳನ್ನೂ ಹಾಕಲು ಹೋಗದೆ ಅವನ ತೋಳುಗಳಲ್ಲಿ ಸೆರೆಯಾದೆ ನಾನು. ಹಾಕಬೇಕಿತ್ತೇ ನಿಬಂಧನೆ? ಇವನ ಮೇಲೆ ಅಂತಹದೊಂದು ಸಂದೇಹ ಬಂದಿದ್ದರೆ ತಾನೇ ನಿಬಂಧನೆಯ ಮಾತು? ನನ್ನನ್ನು ಒಪ್ಪಿಕೊಂಡವನು ನನ್ನ ಇಷ್ಟಾನಿಷ್ಟಗಳನ್ನೂ ಜೊತೆಯಲ್ಲಿ ಸ್ವೀಕರಿಸಿದ್ದಾನೆಂಬ ನಂಬಿಕೆಗೆ ಇಂಬು ಕೊಡುವಂತಿದ್ದ ಇವನ ನಡವಳಿಕೆ. ಮದುವೆಯೊಂದಿಗೆ ಮುಖವಾಡವೂ ಕಳಚಿ ಬೀಳುತ್ತದೆಯೆಂಬ ಲೋಕಜ್ಞಾನದ ಅರಿವಿಲ್ಲದ ಪೆದ್ದಿಯಂತೆ ನಾನಿದ್ದಿದ್ದು ನಿಜ. ಒಂದು ವೇಳೆ ನಿಬಂಧನೆ ಹಾಕಿದ್ದರೂ